Phone : 08282-256465
Mobile No : 9448244273
Email : kuvempuprasaranga@gmail.com

Fax 08282-256262
Website: www.kuvempu.ac.in

ಕುವೆಂಪು ವಿಶ್ವವಿದ್ಯಾಲಯ
**ಪ್ರಸಾರಾಂಗ**
ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

**ಪ್ರೊ. ರೇಚಲ್ ಕುರಿಯನ್**
ನಿರ್ದೇಶಕರು

ಸಂಖ್ಯೆ:ಕುವಿ:ಪ್ರಸಾರಾಂಗ:/2022/68-02 ದಿನಾಂಕ:11-01-2022

## ಪ್ರಕಟಣೆ

**ವಿಷಯ: ಪ್ರೊ. ಶಾಂತಿನಾಥ ದೇಸಾಯಿ ಅವರ ಬದುಕು-ಬರಹ ಕುರಿತ ಲೇಖನಗಳ ಆಹ್ವಾನ.**

****

ಖ್ಯಾತ ಸಾಹಿತಿ, ವಿಮರ್ಶಕರಾದ ಪ್ರೊ. ಶಾಂತಿನಾಥ ದೇಸಾಯಿಯವರು 1987ರಲ್ಲಿ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾಲಯದ ಪ್ರಪ್ರಥಮ ಕುಲಪತಿಗಳಾಗಿ ವಿಶ್ವವಿದ್ಯಾಲಯಕ್ಕೆ ಅಗತ್ಯ ಅಡಿಪಾಯ ಹಾಕಿದವರು. ಯುವಜನತೆಯ ಜ್ಞಾನಾರ್ಜನೆಗೆ ದಾರಿದೀಪವಾಗುವ ಪಥದ ರೂಪುರೇಷೆಯನ್ನು ತಯಾರಿಸಿಕೊಟ್ಟವರು. ನವ್ಯ ಸಾಹಿತ್ಯದ ಮುಂಚೂಣಿ ಲೇಖಕರು. ಕಾದಂಬರಿ, ಸಣ್ಣಕಥೆ, ವಿಮರ್ಶೆ, ಅನುವಾದ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅನನ್ಯ. ಅವರ ಬದುಕು-ಬರಹ ಕುರಿತ ಲೇಖನಗಳ ಕೃತಿಯನ್ನು ಪ್ರಕಟಿಸಲಾಗುವುದು.

ಬರಹಗಾರರಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ. ಲೇಖನಗಳು ಕನಿಷ್ಠ ಒಂದು ಸಾವಿರ ಶಬ್ದಗಳಿಂದ ಗರಿಷ್ಠ 1500 ಶಬ್ದಗಳ ಒಳಗೆ ಇರಬೇಕು. ಇದನ್ನು MS Word Formatನ ನುಡಿ ಒಣಜ-01 ಮಾದರಿಯಲ್ಲಿ ತಯಾರಿಸಿ ಸಾಫ್ಟ್ ಕಾಪಿಯನ್ನು ಪ್ರಸಾರಂಗದ ಇಮೇಲ್- kuvempuprasaranga@gmail.comಗೆ **ದಿನಾಂಕ:30-03-2022ರ** ಒಳಗೆ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ. ಆಯ್ಕೆಯಾದ ಲೇಖನಗಳಿಗೆ ಸೂಕ್ತ ಗೌರವ ಸಂಭಾವನೆ ನೀಡಲಾಗುವುದು. ಲೇಖನ ಕಳುಹಿಸುವವರು ಹೆಸರು ಮತ್ತು ವಿಳಾಸ, ಇಮೇಲ್, ಮೊಬೈಲ್ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸಿ ಕಳುಹಿಸುವುದು.

Rachel Kurian 11/1
ನಿರ್ದೇಶಕರು
ಪ್ರಸಾರಾಂಗ

ನಿರ್ದೇಶಕರು
ಪ್ರಸಾರಾಂಗ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ.

ಗೆ,

1) ನಿರ್ದೇಶಕರು, ಯು.ಸಿ.ಸಿ.ಎಫ್. ಕೇಂದ್ರ ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – ಮೇಲ್ಕಂಡ ಪ್ರಕಟಣೆಯನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ಹಾಗೂ ತಮ್ಮಲ್ಲಿ ಲಭ್ಯವಿರುವ ಎಲ್ಲಾ ಇಮೇಲ್ ವಿಳಾಸಗಳಿಗೆ ರವಾನಿಸಲು ಕೋರಲಾಗಿದೆ.
2) ಡಾ. ಸತ್ಯಪ್ರಕಾಶ್ ಎಂ.ಆರ್. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – ಸೂಕ್ತಕ್ರಮಕ್ಕಾಗಿ ಕೋರಿದೆ.
3) ಹೆಚ್ಚುವರಿ ಪ್ರತಿ
4) ಕಛೇರಿ ಪ್ರತಿ